ಅಧ್ಯಕ್ಷರು :— ಹೋದ ವರ್ಷ ಪ್ರಚಾರ ಮಾಡುವುದಕ್ಕೆ ಅವರು ಇದ್ದರು, ನೀವು ಅಪಪ್ರಚಾರ ಮಾಡುವುದಕ್ಕೆ ಇದ್ದಿರಿ-ಅಲ್ಲವೇ?

ಶ್ರೀ ಸಯದ್ ಜುಲ್ಫಿಕರ್ ಹಷ್ಮಿ:— ಅದರ ಸಲುವಾಗಿ ಅಲ್ಲಿನ ಡಿಸ್ಟ್ರಿಕ್ಟ್ ಆಫಿಸರ್ ಏನು ಮಾಡಿದ್ದಾರೆಂದರೆ, ಉರ್ದು ಪತ್ರಿಕೆಗೆ ಜಾಹೀರಾತು ಕೊಡುತ್ತಿಲ್ಲ. ಸರ್ಕಾರದ ನಿಲುವೇನೆಂಬುದನ್ನು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಾರ್ತಾ ಪ್ರಚಾರ ಇಲಾಖಾ ಸಚಿವರು) :— ಸಾಧಾರಣವಾಗಿ ಆಯಾಯ ಸಂದರ್ಭಕ್ಕನುಗುಣವಾಗಿ ಮೀಡಿಯಾ ಲಿಸ್ಟ್‌ನಲ್ಲಿರುವ ಪತ್ರಿಕೆಗಳಿಗೆ ಜಾಹೀರಾತನ್ನು ಕೊಡುತ್ತಾರೆ. ಕೆಲವು ಸಲ ವಿಶೇಷ ಸಂದರ್ಭಗಳಲ್ಲಿ ಅಂದರೆ ನವೆಂಬರ್ 1, ಆಗಸ್ಟ್ 15 ಇಂಥ ವಿಚಾರಗಳ ಸಂದರ್ಭ ಬಂದಾಗಲೂ ಕೊಡುತ್ತಾರೆ. ಸಣ್ಣ ಪತ್ರಿಕೆಗಳಿಗೆ ಕನಿಷ್ಠ 300 ರೂ.ಗಳಿಗಿಂತ ಕಡಿಮೆ ಇಲ್ಲದಂತೆ 3-4 ಬಾರಿ ಜಾಹೀರಾತು ಕೊಡಬೇಕೆಂಬ ನೀತಿ ಇದೆ. ಕೇವಲ ಕನ್ನಡ ಪತ್ರಿಕೆಗೇ ಮೀಸಲಾಗಿದೆಯೇ ಎಂಬುದು ಜಾಹೀರಾತಿನಲ್ಲಿ ಬರಲಿಕ್ಕೆ ಸಾಧ್ಯವಿಲ್ಲ. ಯಾರು ಬರೆದಿದ್ದಾರೋ ಗೊತ್ತಿಲ್ಲ. ನೋಟ್ ಇದ್ದರೆ, ಅದು ಕಛೇರಿ ಒಳಗಡೆ ಇರುತ್ತದೆಯೇ ವಿನ: ಜಾಹೀರಾತಿನಲ್ಲಿರುವುದಿಲ್ಲ. ತಾವು ಹೇಳಿದಂತೆ ಉರ್ದು ಪತ್ರಿಕೆಗೂ ಜಾಹೀರಾತನ್ನು ಬಿಡುಗಡೆ ಮಾಡಲು ಆದೇಶ ಕೊಡುತ್ತೇನೆ.

(ಅ) ಹಾಪ್‌ಕಾಮ್ಸ್‌ನಲ್ಲಿ ನಡೆದಿರುವ ಅವ್ಯವಹಾರ.

+ ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ) :— ಹಾಪ್‌ಕಾಮ್ಸ್‌ನಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಮೇ ತಿಂಗಳಲ್ಲಿ ಮಾನ್ಯ ಬೈರೇಗೌಡರು ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ಸುಮಾರು ಎರಡೂವರೆ ಕೋಟಿ ರೂಪಾಯಿಗಳ ಅವ್ಯವಹಾರವಾಗಿದ್ದು, ಸಿಓಡಿ ತನಿಖೆಯಾಗಬೇಕೆಂಬ ರೀತಿಯ ಒತ್ತಾಯ ಮಾಡಿದ್ದಾರೆ. ಸಿಓಡಿ ತನಿಖೆಯಾಗಿದೆಯೋ, ಇಲ್ಲವೋ ಗೊತ್ತಿಲ್ಲ. ಅವತ್ತಿನಿಂದ ಇಲ್ಲಿಯವರೆಗೆ ಹಲವಾರು ಅವ್ಯವಹಾರಗಳು ನಡೆಯುತ್ತಿವೆ. ಅದರ ಬಗ್ಗೆ ಸರ್ಕಾರ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ನಾನು ಕೆಲವೇ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಆಲೂಗಡ್ಡೆ ಕೊಂಡುಕೊಳ್ಳಲು ಮಾರ್ಕೆಟ್ ಇಂಟರ್‌ವೆನ್ಷನ್ ಮಾಡುವ ಸಂದರ್ಭದಲ್ಲಿ 65 ಲಕ್ಷ ರೂಪಾಯಿಗಳಷ್ಟು ಫೋಲಾಗಿದೆ ಎಂದು ಬೈರೇಗೌಡರೇ ಹೇಳಿದ್ದಾರೆ. ಹಾಪ್‌ಕಾಮ್ಸ್‌ಗೆ ಕಂಪ್ಯೂಟರ್‌ಗಳನ್ನು ಪರ್ಚೇಸ್ ಮಾಡುವುದರಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿದೆ, ಅದೇ ರೀತಿಯಲ್ಲಿ ಅವುಗಳ ರಿಪೇರಿ ಎಂದು ಹೇಳಿ ಒಂದೇ ವರ್ಷದಲ್ಲಿ ಮತ್ತೆ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದೇ ರೀತಿಯಲ್ಲಿ, ಕೋಲಾರದ ಔಷಧಿ ಅಂಗಡಿಯಲ್ಲಿ 5,60,000 ರೂ. ಬಂದಿದೆ, ಅದಕ್ಕೆ ಲೆಕ್ಕವಿಲ್ಲವೆಂದು ಹೇಳಿ ಅಪವಾದ ಬಂದಿದೆ. ಟಮೋಟೋ ಸ್ಟೋರ್ ಮಾಡಿರುವ ಉಗ್ರಾಣದಲ್ಲಿ 60 ಸಾವಿರ ಕೆಜಿ

ಟಮೋಟೋಗೆ ಲೆಕ್ಕವೇ ಇಲ್ಲ. ರಶೀದಿಯೂ ಇಲ್ಲ. ಎಂಡಿಯವರು 25 ಲಕ್ಷ ರೂಪಾಯಿಗಳಷ್ಟು ಅವ್ಯವಹಾರ ಮಾಡಿದ್ದಾರೆಂದೂ, ತನಿಖೆ ಮಾಡಬೇಕೆಂಬ ಒತ್ತಾ ಬಂದಿದೆ. ಇನ್ನೂ ಹಲವಾರು ರೀತಿಯ ಒತ್ತಾಯಗಳು, ಆರೋಪಗಳು, ಅವ್ಯವಹಾರಗಳು ಅಲ್ಲಿ ನಡೆಯುತ್ತಿದ್ದರೂ ಅದು ಸರ್ಕಾರಕ್ಕೆ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಇಷ್ಟೆಲ್ಲಾ ಅವ್ಯವಹಾರಗಳು ನಡೆಯುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ, ಇದುವರೆಗೂ ಸಹ ಹಾಪ್‌ಕಾಮ್‌ಗಳಲ್ಲಿ ಏನು ನಡೆಯುತ್ತಿದೆ. ಇಷ್ಟು ಕೋಟಿ ರೂಪಾಯಿಗಳ ಅವ್ಯವಹಾರ ನಡೆಯುತ್ತಿದ್ದರೂ ಅದರ ಬಗ್ಗೆ ಯಾರನ್ನೂ ಜವಾಬ್ದಾರಿ ಮಾಡದೆ, ಸರ್ಕಾರ ನಿರ್ಲಕ್ಷ್ಯವಾಗಿದೆ ಎಂದು ಹೇಳಿದರೆ, ಇದರ ಅರ್ಥವೇನು? ಸರ್ಕಾರವೇ ನೇರವಾಗಿ ಇದರಲ್ಲಿ ಶಾಮೀಲಾಗಿದೆಯೇ? ಏಕೆಂದರೆ, ನನಗೆ ಗೊತ್ತಿರುವ ಹಾಗೆ, ತೋಟಗಾರಿಕೆ ಇಲಾಖೆಅಡಿಯಲ್ಲಿರುವ ಸಹಕಾರಿ ಸಂಸ್ಥೆಯದು. ಸರ್ಕಾರಕ್ಕೆ ಅದು ನೇರವಾಗಿ ಸಂಬಂಧಪಟ್ಟಿಲ್ಲ, ಅದರ ಪಾಡಿಗೆ ಅದನ್ನು ಬಿಡಬೇಕೆಂದೇನಾದರೂ ಸರ್ಕಾರದ ತೀರ್ಮಾನವಾಗಿದೆಯೇ? ಏಕೆಂದರೆ, ಇದರ ಬಗ್ಗೆ ಸರ್ಕಾರಕ್ಕೆ ಸ್ಪಷ್ಟವಾಗಿ ಗೊತ್ತಿದೆ. ನನ್ನ ಹತ್ತಿರ ಕಂಪನಿಗಳ ಲಿಸ್ಟ್ ಇದೆ. ಕಂಪ್ಯೂಟರ್ ತರಿಸಿರುವ ಬಗ್ಗೆ, ಕೋಟೇಷನ್ ಯಾರ್ಯಾರು ಹಾಕಿದ್ದಾರೆ, ಯಾರ್ಯಾರಿಗೆ ಕೊಟ್ಟಿದ್ದಾರೆ, ರಿಪೇರಿಗಾಗಿ ಯಾರ್ಯಾರಿಗೆ ಕೊಟ್ಟಿದ್ದಾರೆಂಬ ಮಾಹಿತಿ ಇದೆ. ಲಕ್ಷ್ಮೀಕಾಂತ್ ಎನ್ನುವವರು ಲೋಯೆಸ್ಟ್ ಕೋಟೇಷನ್ ಹಾಕಿದ್ದರೂ, ಅವರಿಗೆ ಕೊಟ್ಟಿಲ್ಲ. ಸರಿ ಸುಮಾರು ಹತ್ತಾರು ಕೋಟಿ ರೂಪಾಯಿಗಳ ಹಗರಣ ಹಾಪ್‌ಕಾಮ್ಸ್‌ನಲ್ಲಿ ಆಗಿದೆ.

ಮಾನ್ಯ ಭೈರೇಗೌಡರ ಪ್ರಕಾರ ಎರಡೂವರೆ ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ ಎಂದು ಪತ್ರ ಬರೆದಿದ್ದಾರೆ. ಇವರ ಪತ್ರ ಬರೆದ ಮೇಲೂ ಕೂಡ ಹಲವಾರು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ. ಅಲ್ಲಿರುವ ಎಂ.ಡಿ. ಮೇಲೆ ಆರೋಪ ಇದೆ. ಅಲ್ಲಿರತಕ್ಕಂಥ ಎಂ.ಡಿ. ಹಾಗೂ ಅಧ್ಯಕ್ಷರು ಹಣವನ್ನು ದುರುಪಯೋಗ ಮಾಡಿಕೊಂಡು ಹಾಪ್ ಕಾಮ್ಸ್ ಎಲ್ಲಾ ವ್ಯವಹಾರಗಳು ದುರುಪಯೋಗವಾಗುತ್ತಿವೆ ಎಂದು ಹೇಳತಕ್ಕಂಥ ಹಲವಾರು ಮನವಿಗಳು ಸರ್ಕಾರಕ್ಕೆ ಬಂದಿವೆ. ಈ ರೀತಿ ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿರುವಲ್ಲಿ ನನ್ನ ಹತ್ತಿರ ಎರಡು-ಮೂರು ಮನವಿಗಳು ಇವೆ. ಇದರ ಜೊತೆಗೆ ಬೇರೆ ಬೇರೆಯವರು ಕೊಟ್ಟಿರತಕ್ಕಂಥ ಮನವಿಗಳು ಕೂಡ ಇವೆ. ಇಷ್ಟೆಲ್ಲಾ ಆದರೂ ಕೂಡ ಸರ್ಕಾರ ಯಾವುದೇ ತನಿಖೆಗೆ ಸಿದ್ಧವಾಗಿಲ್ಲ ಅಂದರೆ ಇದಕ್ಕೇನು ಕಾರಣ? ನನ್ನ ನೇರವಾದ ಆರೋಪ ಏನೆಂದರೆ, ಸರ್ಕಾರ ಹಾಗೂ ಹಿಂದೆ ಈ ಇಲಾಖೆಗೆ ಸಂಬಂಧಪಟ್ಟಂಥ ಮಂತ್ರಿಗಳು ನೇರವಾಗಿ ಇದರಲ್ಲಿ ಶಾಮೀಲಾಗಿದ್ದಾರೆ. ಅವರೇ ಇದಕ್ಕೆ ಜವಾಬ್ದಾರಾಗಿದ್ದಾರೆ. ಏಕೆಂದರೆ, ಒಬ್ಬ ಸಂಪುಟ ದರ್ಜೆ ಮಂತ್ರಿಗಳು ಸಿಓಡಿ ತನಿಖೆಯಾಗಬೇಕೆಂದು ಪತ್ರ ಬರೆದರೂ ಕೂಡ ತನಿಖೆ ಆಗಲಿಲ್ಲವೆಂದರೆ, ಇದರಲ್ಲಿ ಎಷ್ಟು ಪ್ರಭಾವಿತವಾದಂಥ ವ್ಯಕ್ತಿಗಳು ಇರಬಹುದು ಎಂದು ನನ್ನ ನೇರವಾದ ಆರೋಪವಿದೆ. ಅಧ್ಯಕ್ಷರೇ, ತಾವೇನಾದರೂ ನನಗೆ ಅವಕಾಶ ಕೊಟ್ಟಲ್ಲಿ ಎಲ್ಲಾ ವಿವರಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಸಂಪೂರ್ಣವಾದ ತನಿಖೆಯಾಗಬೇಕು. ಏಕೆಂದರೆ, ಸಿಓಡಿ

ತನಿಖೆಯಿಂದ ಸತ್ಯ ಹೊರಗಡೆ ಬರುತ್ತದೆ ಎನ್ನುವ ನಂಬಿಕೆ ನನಗಿಲ್ಲ. ಆದ್ದರಿಂದ, ಸದನ ಸಮಿತಿಯಿಂದ ಇದನ್ನು ತನಿಖೆ ಮಾಡಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಏಕೆಂದರೆ, ಇದರಲ್ಲಿ ಹಲವಾರು ಗಂಭೀರವಾದ ವಿಷಯಗಳು ಇವೆ. ಮತ್ತೊಂದು ಅಷ್ಟೇ ಗಂಭೀರವಾದ ವಿಷಯ ಏನೆಂದರೆ, ನಮ್ಮ ದೇಶದಲ್ಲಿ ಬಿಳಿದಂಥ ಆಲೂಗಡ್ಡೆ ಹಾಗೂ ಇತರೆ ತರಕಾರಿಗಳನ್ನು ದುಬಾಯಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಬಿತಕ್ಕಂಥ ಪ್ರಶ್ನೆ ಬಂತು. ಇದರಂತೆ ದುಬಾಯಿ ಕಂಪನಿಯ ಜೊತೆಗೆ ವ್ಯವಹಾರ ಮಾಡಿದರು. ಈ ರೀತಿ ವ್ಯವಹಾರ ಮಾಡುವುದಾದರೆ, ಟೋಮೋಟೊವನ್ನು ಅಲ್ಲಿಗೆ ಕಳುಹಿಸಿಲ್ಲ ಆದರೆ ಕಳುಹಿಸಿದ್ದೇವೆಂದು ಲೆಕ್ಕ ತೋರಿಸುತ್ತಿದ್ದಾರೆ. ಆದರೆ ಟೊಮೋಟೊ ಕಳುಹಿಸಿದ್ದಕ್ಕೆ ಇಷ್ಟು ಹಣ ವಿರ್ಚು ಆಗಿದೆ ಎಂದು ಲೆಕ್ಕ ಕೊಡುತ್ತಾರೆ. ಈ ರೀತಿಯಾದಂಥ ಹಲವಾರು ಆರೋಪಗಳು ಈ ಪಟ್ಟಿಯಲ್ಲಿವೆ. ನಾನು ಇದನ್ನು ಕೆಲವನ್ನು ಪಟ್ಟಿ ಮಾಡಿ ಹೇಳುತ್ತೇನೆ. 25 ಲಕ್ಷ ರೂಪಾಯಿಗಳನ್ನು ಎಂ.ಡಿ.ಯವರು ಸ್ವಂತಕ್ಕೆ ಬಳಸಿಕೊಂಡಿದ್ದಾರೆನ್ನುವ ಪ್ರಕರಣ ಹಾಪ್‌ಕಾಮ್ಸ್‌ನಲ್ಲಿ ನಡೆದಿದೆ. ಕೋಲಾರದ ಶೀತಲಗೃಹದಲ್ಲಿದ್ದಂಥ ಸಂಘದ 25 ಲಕ್ಷ ರೂಪಾಯಿ ಆಲೂಗಡ್ಡೆ ನಾಪತ್ತೆ.

ಅಧ್ಯಕ್ಷರು :— ರೆಡ್ಡಿಯವರೇ, ಇದು ಶೂನ್ಯವೇಳೆ ತಾವು ಮೆನ್‌ಷನ್ ಮಾಡಿದರೆ ಸಾಕು. ನೀವು ನಿಲುವಳಿ ಸೂಚನೆಯಲ್ಲಿ ಅಥವಾ ರೂಲ್ 69ನಲ್ಲಿ ಮಾತನಾಡುವ ರೀತಿಯಲ್ಲಿ ಮಾತನಾಡಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇದಕ್ಕಾಗಿ ನಾನು ಈ ಮೊದಲೇ ತಮ್ಮನ್ನು ಸಮಯ ಇದ್ದರೆ ನಾನು ಹೇಳುತ್ತೇನೆಂದು ಕೇಳಿದೆ. ತಾವು ಗಮನಿಸಲಿಲ್ಲ.

ಅಧ್ಯಕ್ಷರು :— ಗಮನಿಸಿಲ್ಲವೆಂದ ಮಾತ್ರಕ್ಕೆ ಸಮಯವಿದೆ ಎಂದು ತಿಳಿದುಕೊಂಡು ಬಿಟ್ಟಿರಾ? ಸಮಯವಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸರ್ಕಾರ ಇದಕ್ಕೆ ಉತ್ತರ ಕೊಡಬೇಕು.

ಅಧ್ಯಕ್ಷರು :— ಉತ್ತರ ಕೊಡುತ್ತಾರೆ. ವಾಟಾಳ್‌ರೇ, ತಾವು ಮಾತನಾಡಿ. ತಾವು ಬಿಡಿ ಒಂದು ನಿಮಿಷದಲ್ಲಿ ಮುಗಿಸುತ್ತೀರಿ..

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಅಧ್ಯಕ್ಷರೇ, ಈ ಹಾಪ್‌ಕಾಮ್ಸ್ ಏಕೆ ಆರಂಭವಾಯಿತು ಎಂದರೆ ರೈತರಿಗೆ ಒಳ್ಳೆಯದಾಗಲಿ ಎನ್ನುವ ಸದುದ್ದೇಶದಿಂದ ಆರಂಭವಾಯಿತು. ಈಗ ಅದು ರೈತರ ಪಾಲಿಗೆ ಶಾಪವಾಗಿದೆ. ರೈತ ತಾನು ಬೆಳೆದಿರತಕ್ಕಂಥ ತರಕಾರಿ ಅಥವಾ ಹಣ್ಣುಗಳನ್ನು ಈ ಹಾಪ್‌ಕಾಮ್ಸ್‌ಗೆ ತಂದರೆ, 100 ಕೆ.ಜಿ. ಇದ್ದರೂ 30 ಕೆ.ಜಿ. ಬಿಡಬೇಕಾಗುತ್ತದೆ. ರೈತನು ಒಳ್ಳೆಯ ಪದಾರ್ಥ ತಂದರೂ ಕೂಡ ಅದರಲ್ಲಿ 30 ಕೆ.ಜಿ. ಮೊದಲೇ ಬಿಡಬೇಕು. ಇದೊಂದು ರೀತಿಯಲ್ಲಿ ದೊಡ್ಡ ಮೋಸ. ಅಲ್ಲಿ

ಹಗಲು ದರೋಡೆ ನಡೆಯುತ್ತಿದೆ, ಒಂದು ರೀತಿಯಲ್ಲಿ ತೆರೆಮರೆಯಲ್ಲಿ ರೈತರ ಕೊಲೆಯಾಗುತ್ತಿದೆ. ಯಾವ ಉದ್ದೇಶಕ್ಕಾಗಿ ಈ ಹಾಪ್‌ಕಾಮ್ಸ್ ಆರಂಭವಾಗಿತ್ತೋ ಇಂದು ಇದಕ್ಕೆ ವಿರುದ್ಧವಾದ ಚಿಂತನೆ ಇಲ್ಲಿ ನಡೆಯುತ್ತಿದೆ. ತಾವೇ ಹೇಳಿದಂತೆ ಎರಡೂವರೆ ಕೋಟಿ ರೂಪಾಯಿಗಳ ಅವ್ಯವಹಾರ ಆದರೆ ನಾನು ಮತ್ತು ಮಾನ್ಯ ರೆಡ್ಡಿಯವರು ಸೇರಿಕೊಂಡು ನಮ್ಮದೇ ಆದ ವ್ಯವಸ್ಥೆಯಲ್ಲಿ ತನಿಖೆ ಮಾಡಿದರೆ ಇದು ಕನಿಷ್ಟಪಕ್ಷ ಸುಮಾರು 75 ಕೋಟಿ ರೂಪಾಯಿಗಳಷ್ಟು ಹಣ ನಷ್ಟವಾಗಿದೆ. ಇದಕ್ಕೆ ಬೇಕಾದರೆ ನಾವಿಬ್ಬರೂ ಎಲ್ಲಾ ಅಂಕಿಅಂಶಗಳನ್ನು ತರುತ್ತೇವೆ. ಆದ್ದರಿಂದ, ಈ ರೀತಿ ಆಗುವುದು ಒಳ್ಳೆಯ ದೃಷ್ಟಿ ಅಲ್ಲ. ಶ್ರೀಲಂಕಾಕ್ಕೆ ಹೋದ ಆಲೂಗಡ್ಡೆ ಏನಾಯಿತು, ದುಬಾಯಿಗೆ ಹೋದ ಆಲೂಗಡ್ಡೆ ಏನಾಯಿತು? ಹಣ ಯಾರು ತಂದರು? ಎಲ್ಲಿಗೆ ಹೋಯಿತು? ಇದಲ್ಲದೆ, ಆ ಸ್ಟಾಲ್‌ನಲ್ಲಿ ಮತ್ತು ಗೋಡೌನಲ್ಲಿರುವವರೆಲ್ಲರೂ ಕೂಡ ಏಜೀಮರಾಗಿ ಬೆಳೆದಿದ್ದಾರೆ. ಅಲ್ಲಿರತಕ್ಕಂಥ ಕೆಲಸಗಾರರು ಸಂಜೆ ಮನೆಗೆ ಹೋಗುವಾಗ ನಾಲ್ಕು ಬ್ಯಾಗ್‌ಗಳಲ್ಲಿ ಹಣ್ಣು, ತರಕಾರಿ, ತಾವೇ ತೆಗೆದುಕೊಂಡು ಹೋಗುತ್ತಾರೆ. ಒಳ್ಳೆಯ ಉತ್ತಮವಾದ ಹಣ್ಣು, ತರಕಾರಿ, ಇವುಗಳನ್ನು ಬೇರೆಯವರಿಗೆ ತೆಗೆದುಕೊಂಡು ಹೋಗಿ ಕೊಡುವುದಕ್ಕಲ್ಲ; ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಇದಲ್ಲದೆ ರೈತರು ತಂದಿರತಕ್ಕಂಥ ತರಕಾರಿ, ಹಣ್ಣು, ಇತರೆಗಳಿಗೆ ಸರಿಯಾದ ಬೆಲೆ ಕೊಡುವುದಿಲ್ಲ. ಇವತ್ತು ನಮಗೆ ಬೇಕಾಗಿಲ್ಲ ಎಂದು ಹೇಳಿ ತಾವೇ ಮಾರುಕಟ್ಟೆಗೆ ಹೋಗಿ ತರತಕ್ಕಂಥ ವ್ಯವಸ್ಥೆ ಇದೆ.

ಅಧ್ಯಕ್ಷರು :— ವಾಟಾಳ್‌ರೇ, ತಮಗೆ ಇದು ಎಲ್ಲಾ ಯಾವ ರೀತಿ ಗೊತ್ತಾಯಿತು?

ಶ್ರೀ ವಾಟಾಳ್ ನಾಗರಾಜ್ :— ನಾವು ಮನುಷ್ಯರು ತಾನೇ, ನಾವು ಕೂಡ ಬಾಳೇಹಣ್ಣು, ಸೇಬು, ಕಿತ್ತಳೆಹಣ್ಣು, ಎಲ್ಲಾ ತರುತ್ತೇವೆ. ಇದೆಲ್ಲಾ ಗೊತ್ತಾಗುತ್ತದೆ. ಅಲ್ಲಿ ಇದೇ ಪರಿಸ್ಥಿತಿ ಇರುವುದು.

ಅಧ್ಯಕ್ಷರು :— ಬೇರೆ ಯಾವುದು ಏನೋ, ಇದು ಮಾತ್ರ ಸತ್ಯ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ನಾಗರಾಜ್‌ರವರು, "ಅವರು ತೆಗೆದುಕೊಂಡು ಹೋಗುತ್ತಿರುವುದು ಬೇರೆಯವರಿಗೆ ಕೊಡುವುದಕ್ಕಲ್ಲ" ಎಂದು ಹೇಳಿದರು. ಬೇರೆಯವರಿಗೆ ಕೊಡುವುದಾದರೆ, ತೆಗೆದುಕೊಂಡು ಹೋಗಬಹುದೇ?

ಶ್ರೀ ವಾಟಾಳ್ ನಾಗರಾಜ್ :— ರೈತರ ಸುದುದ್ದೇಶಕ್ಕಾಗಿ ಆರಂಭವಾದ ಈ ಹಾಪ್‌ಕಾಮ್ಸ್ ಇಂದು ಇದಕ್ಕೆ ವಿರುದ್ಧವಾದ ರೀತಿಯಲ್ಲಿ ನಡೆದುಕೊಳ್ಳುತ್ತಿದೆ. ಇದರಲ್ಲಿ ಅನೇಕರು ಸೇರಿದ್ದಾರೆ. ಇವರಲ್ಲಿ ಅಲ್ಲಿರತಕ್ಕಂಥ ನಿರ್ದೇಶಕರು ಇರಬಹುದು. ಕೆಲವು ಚುನಾಯಿತ ಜನ ಪ್ರತಿನಿಧಿಗಳಿರಬಹುದು ಅನೇಕರು ಸೇರಿದ್ದಾರೆ. ಮಾನ್ಯ ಬೈರೇಗೌಡರವರಿಗೆ ನಾನು ಏನು ಹೇಳುತ್ತೇನೆಂದರೆ, ತಾವು ಇದೀಗ ಈ ಇಲಾಖೆಗೆ ಬಂದಿದ್ದೀರಿ, ತಾವು ಕೃಷಿ ಇಲಾಖೆಯಲ್ಲಿದ್ದಾಗ ಒಳ್ಳೆಯ ಕೆಲಸ ಮಾಡಿರುತ್ತೀರಿ. ಈಗಾಗಲೇ ತಮಗೆ ಒಳ್ಳೆಯ

ಹೆಸರು ಬಂದಿದೆ. ಆದ್ದರಿಂದ, ಈ ತೋಟಗಾರಿಕೆ ಇಲಾಖೆಯನ್ನು ಆದರಲ್ಲೂ ಹಾಪ್‌ಕಾಮ್ಸ್‌ನ್ನು ಸಂಪೂರ್ಣವಾಗಿ ತನಿಖೆ ಮಾಡಿದರೆ ನಾವೇನು ಈಗ 75 ಕೋಟಿ ರೂಪಾಯಿಗಳು ನಷ್ಟವಾಗಿವೆ ಎಂದು ಹೇಳಿದೆವು ಆದಕ್ಕಿಂತಲೂ ಜಾಸ್ತಿ ಇದ್ದರೆ ಇರಬಹುದು, ಆದ್ದರಿಂದ ತಾವು ದಯಮಾಡಿ ಇದರ ಬಗ್ಗೆ ಸ್ಪಷ್ಟವಾದ ಉತ್ತರ ಹೇಳಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಹಾಪ್‌ಕಾಮ್ಸ್‌ಗೆ ಪೋಸ್ಟ್ ಮಾಡಿಸಿರುವ ಒಬ್ಬ ಆಫೀಸರ್‌ನ್ನು ಕನಿಷ್ಟಪಕ್ಷ ರಿಪೋರ್ಟ್ ಮಾಡಿಸಲಿಕ್ಕೆ ಆಗಲಿಲ್ಲವೆಂದರೆ ಯಾವ ಸ್ಥಿತಿ ಇದೆ? ತಾವು ಒಬ್ಬ ಅಧಿಕಾರಿಯನ್ನು ಹಾಪ್‌ಕಾಮ್ಸ್‌ಗೆ ಹಾಕಿದಾಗ ಅವರು ಅವರನ್ನು ತೆಗೆದುಕೊಳ್ಳುವುದಿಲ್ಲವೆಂದರು. ಅವರನ್ನು ತೆಗೆದುಕೊಳ್ಳಿ ಎಂದು ಸನ್ಮಾನ್ಯ ಕೃಷಿ ಸಚಿವರು ಹೇಳಿದ್ದರು. ಹೀಗಿದ್ದರೂ ಅವರು ಆ ಅಧಿಕಾರಿಯನ್ನು ತೆಗೆದುಕೊಳ್ಳದೆ ಮಾಪ್ಸ್ ಕಳುಹಿಸತಕ್ಕಂಥ ಸ್ಥಿತಿ ನಿರ್ಮಾಣವಾದರೆ ಹೇಗೆ?

ಶ್ರೀ ಸಿ. ಭೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :— ಅಧ್ಯಕ್ಷರೆ, ಮಾನ್ಯ ರೆಡ್ಡಿಯವರು ಹೇಳಿದ ಪ್ರಕಾರ ಅದೊಂದು ಸಹಕಾರ ಸಂಘ, ಸ್ವಾಯತ್ತ ಸಂಸ್ಥೆ, ಇದರ ಮೇಲೆ ನೇರವಾಗಿ ಪ್ರತಿದಿವಸ ಸರ್ಕಾರ ಕೈ ಹಾಕುವುದಕ್ಕೆ ಆಗುವುದಿಲ್ಲ. ಆದರೆ, ಕಾನೂನು ವಿರುದ್ಧವಾದಂಥ ದುರಾಡಳಿತ ಏನಿದೆ ಇಂಥ ಸಂದರ್ಭದಲ್ಲಿ ಸರ್ಕಾರಕ್ಕೆ ಎಲ್ಲಾ ಅಧಿಕಾರವೂ ಇದೆ. ಇದನ್ನು ಸರಿಪಡಿಸತಕ್ಕಂಥದ್ದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಮಾನ್ಯ ಸದಸ್ಯರು ಕೆಲವು ಘಟನೆಗಳನ್ನು ಹೇಳಿದ್ದಾರೆ. ನನ್ನ ಅನುಭವವು ಕೂಡ ಅದಕ್ಕಿಂತ ವಿಭಿನ್ನ ಏನೂ ಇಲ್ಲ. ಏಕೆಂದರೆ, ನಾನು ಕೂಡ ಸ್ವಂತ ವ್ಯವಸಾಯಗಾರನಾಗಿರುವುದರಿಂದ ನನಗೆ ಇದೆಲ್ಲಾ ಗೊತ್ತಿದೆ. ಇದರಲ್ಲಿ ಷೇರು ಸರ್ಟಿಫಿಕೇಟ್ ಬಗ್ಗೆ ಹೇಳುವುದಾದರೆ, ಈ ಸಹಕಾರ ಸಂಘದಲ್ಲಿ ಮೊದಲನೆ ಷೇರು ಸರ್ಟಿಫಿಕೇಟ್ ಇರುವುದೇ ನನ್ನ ಹೆಸರಿನಲ್ಲಿ. ನಾವೂ ಕೂಡ ಕಳೆದ ವರ್ಷ ಲಕ್ಷಾಂತರ ರೂಪಾಯಿಗಳ ಬಾಳೇಕಾಯಿ, ಪರಂಗಿಹಣ್ಣು, ಸರಬರಾಜು ಮಾಡಿರತಕ್ಕಂಥದ್ದು ನಿಜ. ನಮ್ಮ ಮಾನ್ಯ ಪ್ರಕಾಶ್‌ರವರು ಕೂಡ ದಾಳಿಂಬೆ ಬೆಳೆಯುತ್ತಾರೆ. ಅವರೂ ಕೂಡ ಈ ಹಾಪ್‌ಕಾಮ್ಸ್ ಸಹವಾಸವೇ ಬೇಡ ಆ ಕಡೆ ಹೆಜ್ಜೆಯನ್ನೇ ಹಾಕುವುದಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಅಧ್ಯಕ್ಷರೆ, ಮಾನ್ಯ ಭೈರೇಗೌಡರವರು ಬಹಳ ಹಿರಿಯ ಸಚಿವರಾಗಿ ಒಂದು ಮಾತನ್ನು ಹೇಳಿದರು. ಅವರಿಗೇನು ಈ ಬಗ್ಗೆ ಅನುಭವ ಆಗಿದೆ ಇಂಥ ಅನುಭವ ಬಹುತೇಕ ನಮ್ಮೆಲ್ಲರಿಗೂ ಆಗಿದೆ. ಆದ್ದರಿಂದ, ಇದನ್ನು ಏನಾದರೂ ಸರಿಪಡಿಸುವಂಥ ಒಂದು ವ್ಯವಸ್ಥೆ ಮಾಡಿ. ಇಲ್ಲವಾದರೆ ಇದನ್ನು ರದ್ದು ಮಾಡಿಬಿಡಿ. ಬೇರೆ ವ್ಯವಸ್ಥೆ ಮಾಡಿ. ಇಲ್ಲದಿದ್ದರೆ ಒಂದು ರೀತಿಯ ಸುಲಿಗೆ ಆಗುತ್ತಿದೆ.

ಅಲ್ಲಿರುವಂಥ ಹೆಗ್ಗಣಗಳನ್ನು ತೆಗೆದು ಹಾಕಿ ಸೂಕ್ತ ಕ್ರಮ ತೆಗೆದುಕೊಂಡು ಸರಿಪಡಿಸಿ, ಇದು ಆಗಲ್ಲ ಎಂದರೆ ರೈತರು ಬದುಕುವುದಕ್ಕೆ ಬೇರೆ ಏನಾದರೂ ವ್ಯವಸ್ಥೆ ಮಾಡಿ.

ಶ್ರೀ ಸಿ. ಬೈರೇಗೌಡ :— ಈ ಸಂಸ್ಥೆ ಇರುವುದೇ ರೈತರ ಹಿತರಕ್ಷಣೆಗಾಗಿ, ಅಲ್ಲಿ ರೈತರ ಹಿತರಕ್ಷಣೆ ಸಂಪೂರ್ಣವಾಗಿ ಆಗುತ್ತಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಿಮಗಿಂತ ತೀವ್ರವಾಗಿರುವಂತಹ ಕೆಟ್ಟ ಅನುಭವಗಳು ನಮಗೂ ಕೂಡ ಆಗಿವೆ. ಇದರಲ್ಲಿ ಏನೇನು ಲೋಪದೋಷಗಳಿವೆ, ಆ ಎಲ್ಲಾ ಲೋಪದೋಷಗಳನ್ನು ಸರಿಪಡಿಸತಕ್ಕಂಥ ಕ್ರಮಗಳನ್ನು ನಾನು ತೆಗೆದುಕೊಳ್ಳುತ್ತೇನೆ. ತಾವು ಇದಕ್ಕೆ ಸಿಓಡಿ ತನಿಖೆ ಬೇಕಾಗಿಲ್ಲ ಎಂದು ಹೇಳುತ್ತಿದ್ದೀರಿ. ಇಲ್ಲಿ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಇದೆ. Suo mot, they can enquire into the matter. ಆ ಸಮಿತಿಯಲ್ಲಿರತಕ್ಕಂಥ ಯಾರಾದರೂ ಮಾನ್ಯ ಸದಸ್ಯರು ಈ ಬಗ್ಗೆ ವಿಚಾರಣೆ ತೆಗೆದುಕೊಳ್ಳಿ. ಈ ಬಗ್ಗೆ ವಿಚಾರಣೆ ಮಾಡಿ. ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ಈ

(ಈ ಹಂತದಲ್ಲಿ ಸನ್ಮಾನ್ಯ ಬಿ.ಬಿ. ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

12.ಪಿ.ಎಂ.

ವಿಚಾರವನ್ನು ಯಾವಾಗ ಬೇಕಾದರೂ ತೆಗೆದುಕೊಂಡು ವಿಚಾರ ಮಾಡತಕ್ಕಂಥ ಅಧಿಕಾರ ಇದೆ. ಈ ವಿಷಯವನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ವಿಚಾರಣೆ ಮಾಡುವುದಾದರೆ ನನಗೆ ಬಹಳ ಖುಷಿಯಾಗುತ್ತದೆ ಮತ್ತು ಅಲ್ಲಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸುತ್ತೇನೆ. ಇಲ್ಲದಿದ್ದರೆ ಈ ಜಾಗವನ್ನು ಬಿಡುತ್ತೇನೆ. ರೈತರಿಗೆ ಈ ರೀತಿಯಾದ ಅನ್ಯಾಯ, ಮೋಸ ನನ್ನ ಅಧೀನದಲ್ಲಿರತಕ್ಕಂಥ ಸಂಸ್ಥೆಯಿಂದ ಆಗುತ್ತದೆಂದರೆ ನಾನು ಈ ಸ್ಥಾನದಲ್ಲಿರುವುದಕ್ಕೆ ಅನರ್ಹ ಎಂಬುದರಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂಥವನು. ಎಲ್ಲವನ್ನು ಸರಿಪಡಿಸುವುದಕ್ಕೆ ನಾನು ಪ್ರಾಮಾಣಿಕ ಕೆಲಸ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಸರಿಪಡಿಸುವುದಕ್ಕೆ ಬೇಡ ಎಂದು ಯಾರು ಹೇಳಿದ್ದಾರೆ? ತಾವು ನಾಲ್ಕೈದು ವರ್ಷದಿಂದ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ :— ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ವೈಯಕ್ತಿಕವಾಗಿ ತಾವು ಹೇಳುತ್ತಿದ್ದೀರಿ ಎಂದು ನಾನು ಹೇಳುತ್ತಿಲ್ಲ. ಇದನ್ನು ನೀವು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬೇಕಾಗಿತ್ತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ನಿಮ್ಮ ಸದಸ್ಯರೂ ಕೂಡ ಇರುವುದರಿಂದ ಅಲ್ಲಿ ನೀವು ತೀರ್ಮಾನ ಮಾಡಬೇಕಾಗಿತ್ತು ಅಥವಾ ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು.

ಶ್ರೀ ಸಿ. ಬೈರೇಗೌಡ :— ಹಿಂದೆ ಕೂಡ ಸರಿಪಡಿಸತಕ್ಕಂಥ ಪ್ರಯತ್ನ ನಡೆದಿದೆ, ನಾನು ಮಾಡಿಲ್ಲವೆಂದು ಹೇಳುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಈಗ ಎರಡು ಇಲಾಖೆ ನಿಮ್ಮ ಕಡೆ ಇರುವುದರಿಂದ ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಿ.

ಶ್ರೀ ಸಿ. ಬೈರೇಗೌಡ :— ನಾನು ಹಿಂದೆ ಇದ್ದಂಥ ಮಾನ್ಯ ಸಚಿವರು ಏನೂ ಮಾಡಿಲ್ಲವೆಂದು ಹೇಳುತ್ತಿಲ್ಲ. ಅವರೂ ಕೂಡ ಶಕ್ತಿ ಮೀರಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದಾರೆ.

ಶ್ರೀ ಮಾಟಾಳ್ ನಾಗರಾಜ್ :— ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ವಹಿಸುತ್ತೇನೆಂದು ಛೇರ್ಮನ್‌ರವರು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಬೈರೇಗೌಡರು ಎರಡು ಇಲಾಖೆಗಳಿಗೆ ಮಂತ್ರಿಗಳಾಗಿದ್ದು, ಅಲ್ಲಿರತಕ್ಕಂತಹ ಲೋಪದೋಷಗಳನ್ನು ಸಹ ಅವರು ಒಪ್ಪಿಕೊಂಡಿದ್ದಾರೆ. ಈ ಲೋಪದೋಷಗಳನ್ನು ಸರಿಪಡಿಸದೇ ಹೋದರೆ ಈ ಸ್ಥಾನದಲ್ಲಿರುವುದಿಲ್ಲ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಎರಡು ಇಲಾಖೆ ಇವರ ಅಧೀನದಲ್ಲಿರುವಾಗ ಈ ವಿಷಯವನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಿ ರಿಪೋರ್ಟ್ ಪಡೆದುಕೊಳ್ಳಬಹುದು.

ಶ್ರೀ ಸಿ. ಬೈರೇಗೌಡ :— ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ಈ ವಿಚಾರವನ್ನು ಒಪ್ಪಿಸುವುದಕ್ಕೆ ಸರ್ಕಾರ ತಯಾರಿದೆ. ಈ ವಿಷಯವನ್ನು ಮಾನ್ಯ ಛೇರ್ಮನ್‌ರವರ ತೀರ್ಮಾನಕ್ಕೆ ಸರ್ಕಾರ ಬಿಡುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಈ ಹಗರಣವನ್ನು ತನಿಖೆ ಮಾಡುವುದಕ್ಕೆ ವಹಿಸಬೇಕೆಂದು ಸರ್ಕಾರ ಒಪ್ಪಿಕೊಂಡಿದೆ.

ಛೇರ್ಮನ್ :— ಮಂತ್ರಿಗಳು ಒಪ್ಪಿಕೊಂಡಿದ್ದಾರೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ :— ತಾವೇ ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಬೇಕೆಂದು ಮಾನ್ಯ ಮಂತ್ರಿಗಳೇ ಹೇಳುತ್ತಿದ್ದಾರೆ.

ಛೇರ್ಮನ್ :— ಮಂತ್ರಿಗಳನ್ನು ತಾವು ಒಪ್ಪಿಸುವುದಕ್ಕೆ ತಯಾರಿದ್ದೀರಾ?

ಶ್ರೀ ಸಿ. ಬೈರೇಗೌಡ :— ಈ ವಿಷಯವನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ವಹಿಸಲು ಸರ್ಕಾರ ತಯಾರಿದೆ. ಅಲ್ಲಿ ನಡೆದಿರತಕ್ಕಂಥ ಎಲ್ಲಾ ವಿವರಗಳನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸುವುದಕ್ಕೆ ಸರ್ಕಾರ ಸಿದ್ಧ ಇದೆ. ನಾನು ಬಹಳ ಸಂತೋಷದಿಂದ ಈ ಮಾತನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿದ್ದೇನೆ.

ಭೇರ್ಮನ್ :— ಸರ್ಕಾರ ಒಪ್ಪಿಕೊಂಡಿರುವುದರಿಂದ ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸಲು ಅನುಮತಿ ನೀಡಲಾಗಿದೆ.

ಶ್ರೀ ಸಿ. ಬೈರೇಗೌಡ :— ನಾನು ವೈಯಕ್ತಿಕವಾಗಿ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಭೇರ್ಮನ್‌ರವರು ಬಹಳ ವಿಚಾರ ಮಾಡಿ ಹೇಳಿದ್ದಕ್ಕೆ ಸಂತೋಷ.

(ಕ) ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಚುನಾವಣೆ.

ಭೇರ್ಮನ್ :— ಸನ್ಮಾನ್ಯ ಯಾವಗಲ್‌ರವರು ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೋಸ್ಕರ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಇವತ್ತು ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲ ಮತ್ತು ತಾವು ಪತ್ರವನ್ನು ಇವತ್ತು ಬೆಳಿಗ್ಗೆ ಕೊಟ್ಟಿರುವುದರಿಂದ ನಾಳೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಆರ್. ಯಾವಗಲ್ :— ಇದು ಬಹಳ ಪ್ರಮುಖವಾದ ವಿಚಾರ. ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಚುನಾವಣೆಗೆ ನಾಮಪತ್ರ ಸಲ್ಲಿಸಲು ನಾಳೆ ಕೊನೆ ದಿವಸವಾಗಿರುವುದರಿಂದ ಈ ವಿಷಯ ಸರ್ಕಾರದ ಗಮನಕ್ಕೆ ತರಬೇಕು.

ಭೇರ್ಮನ್ :— ಈಗ ಉತ್ತರ ಕೊಡುವುದಕ್ಕೆ ಮಂತ್ರಿಗಳಿಲ್ಲ.

ಶ್ರೀ ಬಿ.ಆರ್. ಯಾವಗಲ್ :— ನನಗೆ ಉತ್ತರ ಬೇಕು. ಹಾಗೆಯೇ ಇದನ್ನು ಸಭೆಯ ಗಮನಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು.

ಭೇರ್ಮನ್ :— ಮಾನ್ಯ ಮಂತ್ರಿಗಳನ್ನು ಸಭೆಗೆ ಕರೆಸಿಕೊಂಡು ಉತ್ತರ ಕೊಡಿಸೋಣ. ಆದುದರಿಂದ, ಇದನ್ನು ನಾಳೆ ಇಟ್ಟುಕೊಳ್ಳೋಣ.

ಶ್ರೀ ಬಿ.ಆರ್. ಯಾವಗಲ್ :— ನಾಳೆ ದಿವಸ ಇದನ್ನು ಇಟ್ಟುಕೊಂಡರೆ ಏನೂ ಪ್ರಯೋಜನ ಆಗುವುದಿಲ್ಲ. ಈಗಾಗಲೇ ಚುನಾವಣೆ ಪ್ರೋಸಸ್ ಚಾಲನೆಯಾಗಿದೆ ಮತ್ತು ನಾಮಪತ್ರ ಸಲ್ಲಿಸುವುದಕ್ಕೆ ಇವತ್ತು ಕೊನೆಯ ದಿವಸವಾಗಿರುವುದರಿಂದ ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ಏನು ಪರಿಹಾರ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಬೇಕು. ಇಲ್ಲದಿದ್ದರೆ ದೊಡ್ಡ ಅಪಾದನೆ ಸರ್ಕಾರದ ಮೇಲೆ ಬರುತ್ತದೆ. ಆದ್ದರಿಂದ ದಯವಿಟ್ಟು ಇವತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು.

ಭೇರ್ಮನ್ :— ಇದರ ಬಗ್ಗೆ ಉತ್ತರ ಕೊಡುವುದಕ್ಕೆ ಮಂತ್ರಿಗಳಿಲ್ಲ.